ಕರ್ನಾಟಕ ಸರ್ಕಾರ

## ಅಪರ ಸಿವಿಲ್ ಜಡ್ಜ್ ಮತ್ತು ಜೆಎಮ್ಎಫ್‌ಸಿ ನ್ಯಾಯಾಲಯ, ದೇವನಹಳ್ಳಿ

ಸಿ.ಸಿ.ನಂ.2136-2016

ಹೆಸರು ಃ ಶ್ರೀನಿವಾಸಪ್ರಸಾದ್
ತಂದೆ ಃ ಎ.ಮುನಿಯಪ್ಪ
ವಯಸ್ಸು ಃ 46
ಉದ್ಯೋಗ ಃ ಖಾಸಗಿ ನೌಕರ
ವಾಸ ಃ ವಿಜಯನಗರ, ಬೆಂಗಳೂರು

**PW -1 CW-2,**

ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು, ದಿನಾಂಕ 11-09-2019

ಮುಖ್ಯ ವಿಚಾರಣೆ ಃ ಎಪಿಪಿರವರಿಂದ ಃ

ನ್ಯಾಯಾಲಯದ ಮುಂದಿರುವ ಆರೋಪಿ ಗೊತ್ತಿಲ್ಲ. ಚಾಸಾ 1, 3 ಮತ್ತು 4 ಗೊತ್ತಿಲ್ಲ. ಈ ಪ್ರಕರಣದ ಬಗ್ಗೆ ನನಗೆ ಯಾವುದೇ ವಿಚಾರ ಗೊತ್ತಿಲ್ಲ. ಈ ಪ್ರಕರಣದ ಅಪಘಾತವನ್ನ ನೋಡಿರುವುದಿಲ್ಲ. ತನಿಖಾಧಿಕಾರಿಯವರ ಮುಂದೆ ಯಾವುದೇ ಹೇಳಿಕೆ ನೀಡಿರುವುದಿಲ್ಲ.

2. ಸಾಕ್ಷಿಗೆ ಮಹಜರನ್ನು ತೋರಿಸಲಾಯಿತು. ಅದರಲ್ಲಿ ತನ್ನ ಸಹಿಯನ್ನು ಗುರುತಿಸಿರುತ್ತಾರೆ. ಮಹಜರನ್ನು ನಿಪಿ 1 ಎಂದು, ಸಾಕ್ಷಿಯ ಸಹಿಯನ್ನು ನಿಪಿ 1 (ಎ) ಎಂದು ಗುರುತಿಸಲಾಯಿತು. 2016 ರಲ್ಲಿ ಚಿಕ್ಕಜಾಲದಲ್ಲಿ ಎಮ್‌ವಿಐಟಿ ಜಂಕ್ಷನ್‌ನಲ್ಲಿ ಪೋಲೀಸರು ಮಹಜರು ಮಾಡಿದಾಗ ಪೋಲೀಸರು ನನ್ನ ಸಹಿ ಪಡೆದಿರುತ್ತಾರೆ.

(ಈ ಹಂತದಲ್ಲಿ ಎಪಿಪಿರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಬೇಕೆಂದು ಕೋರಿದ್ದು , ಸಾಕ್ಷಿಯು ಅಭಿಯೋಜನಾ ಪ್ರಕರಣಕ್ಕೆ ವ್ಯತಿರಿಕ್ತವಾಗಿ ಸಾಕ್ಷಿ ನುಡಿದಿರುವ ಕಾರಣ ಮಾನ್ಯ ಎಪಿಪಿರವರ ಕೋರಿಕೆಯನ್ನು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು)

ಪಾಟೀ ಸವಾಲು ಃ ಮಾನ್ಯ ಎಪಿಪಿರವರಿಂದ ಃ

3. ದಿ.19-02-2016 ರಂದು ಬೆಳಿಗ್ಗೆ 9-30 ಗಂಟೆಗೆ ನಾನು ನನ್ನ ಸ್ವಂತ ಕೆಲಸದ ನಿಮಿತ್ತ ಬಿಬಿ ರಸ್ತೆಯ ಎಮ್‌ವಿಐಟಿ ಜಂಕ್ಷನ್‌ನಲ್ಲಿ ನಾನು ಬರುತ್ತಿದ್ದಾಗ ಒಬ್ಬ ಹೆಣ್ಣು ಮಗಳು ಅದೇ ಸಮಯದಲ್ಲಿ ಎಮ್‌ವಿಐಟಿ ಕಾಲೇಜ್ ಕಡೆಗೆ ರಸೆತ ದಾಟುತ್ತಿದ್ದಾಗ

ದೇವನಹಳ್ಳಿ ಕಡೆಯಿಂದ ಕಾರು ನಂ.ಕೆಎ-03-ಎಮ್‌ಜೆ-9903 ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಸದರಿ ಹೆಣ್ಣು ಮಗಳಿಗೆ ಡಿಕ್ಕಿ ಮಾಡಿರುತ್ತದೆ ಎಂರದೆಸುಳ್ಳು. ಸದರಿ ಅಪಘಾತದಿಂದ ಸದರಿ ಹೆಂಗಸು ಎಗರಿ ಕಾರಿನ ಗ್ಲಾಸ್ ಮೇಲೆ ಬಿದ್ದು ನಂತರ ರಸ್ತೆ ಮೇಲೆ ಬಿದ್ದಿರುತ್ತಾರೆ. ನಾನು ಹಾಗೂ ಸಾರ್ವಜನಿಕರು ಹತ್ತಿರ ಹೋಗಿ ನೋಡಿ ಸದರಿ ಗಾಯಾಳುವನ್ನು ಆಂಬ್ಯುಲೆನ್ಸ್ ಮೂಲಕ ಆಸ್ಪತ್ರೆಗೆ ಕಳುಹಿಸಿರುತ್ತೇವೆ ಎಂದರೆ ಸುಳ್ಳು. ನಂತರ ಸದರಿ ಹೆಂಗಸನ್ನು ಕೊಲಂಬಿಯಾ ಏಷ್ಯಾ ಆಸ್ಪತ್ರೆ ಸಾಗಿಸುವ ಮಾರ್ಗಮದ್ಯ ಮೃತಪಟ್ಟಿರುತ್ತಾರೆ ಎಂದರೆ ಸುಳ್ಳು. ಸದರಿ ಅಪಘಾತವು ಮೇಲೆ ಹೇಳಿದ ವಾಹನದಿಂದ ಆಗಿರುತ್ತದೆ ಎಂರದೆ ಸುಳ್ಳು. ಸದರಿ ವಾಹನವನ್ನು ಆರೋಪಿ ಚಾಲಕರಾಗಿದ್ದು ಅವರನ್ನು ಗುರುತಿಸಿ ಈಗ ಓದಿ ಹೇಳಿದಂತೆ ದಿ.19-02-2016 ....... ಹೇಳಿಕೆ ನೀಡಿರುತ್ತೇನೆ ಎಂದರೆ ಸುಳ್ಳು.

4. ಅದೇ ದಿನ ಪೋಲೀಸರು ಅಪಘಾತದ ಸ್ಥಳಕ್ಕೆ ಬಂದು ನಿಪಿ 1 ರಂತೆ ಮಹಜರು ಮಾಡಿದಾಗ ನಾನು ಹಾಜರಿದ್ದು ಸಹಿ ಮಾಡಿರುತ್ತೇನೆ ಎಂದರೆ ಸುಳ್ಳು. ನನಗೆ ಈ ಪ್ರಕರಣದ ಬಗ್ಗೆ ಎಲ್ಲಾ ವಿಚಾರಗಳು ಗೊತ್ತಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸುಳ್ಳು.

ಪಾಟೀ ಸವಾಲು ಇಲ್ಲ ಎನ್ನುತ್ತಾರೆ.

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಎ. ಒಪ್ಪಲಾಗಿದೆ.

ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ದೇವನಹಳ್ಳಿ.